ಶ್ರೀ ಕೆ. ಶ್ರೀರಾಮುಲು.—ಈಗಾಗಲೇ ಕೇಂದ್ರ ಸರ್ಕಾರದವರು ರಾಮೆಟೀರಿಯಲ್ಸ್ ಬ್ಯಾಂಕ್ ಮಾಡಲು ೨೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ೧ ಕೋಟಿ ರೂಪಾಯಿಗಳು ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್‌ನಿಂದ ಬಂದಿದೆ. ಆದ್ದರಿಂದ ಅದು ಇಷ್ಟರಲ್ಲೇ ತೀರ್ಮಾನವಾಗುತ್ತದೆ ಆದು ತೀರ್ಮಾನವಾಗುವವರೆಗೆ ಈ ಒಂದು ಕಾರ್ಯ ನಿಲ್ಲುವಂತೆ ಆಗತ್ಯವಿಲ್ಲ. ರೈತರ ರೇಷ್ಮೆ ಗೂಡಿಗೆ ತಕ್ಕ ಬೆಲೆ ಸಿಕ್ಕುವುದಕ್ಕೆ ಸಾಕಷ್ಟು ಅವಕಾಶ ಇದೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಮಂತ್ರಿಯವರು ಕಳಿಸಿರುವ ಯೋಜನೆಗೆ ಯಾವಾಗ ಅನುಮೋದನೆ ಕೊಡುತ್ತಾರೆ ಎಂಬ ಬಗ್ಗೆ ಹೇಳಲಿಲ್ಲ.

ಶ್ರೀ ಕೆ. ಶ್ರೀರಾಮುಲು.— ಈ ವಿಚಾರದಲ್ಲಿ ಈ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಸೇರಿ ವಿಚಾರ ಮಾಡಬೇಕಾಗಿದೆ. ಏಕೆಂದರೆ ಇದು ೩೦ ಕೋಟಿ ರೂಪಾಯಿಗಳ ವ್ಯವಹಾರವಾಗಿದೆ ಒಬ್ಬರೇ ತೀರ್ಮಾನ ತೆಗೆದುಕೊಳ್ಳತಕ್ಕಂಥ ವಿಷಯವಲ್ಲ ಇದು ನನ್ನ ಇಲಾಖೆಯಲ್ಲೂ ಅಷ್ಟು ದುಡ್ಡು ಇಲ್ಲ.

Objection to moving of Demands relating to Co-operation Department

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಸಹಕಾರ ಸಚಿವರು ಈ ಸಭೆಯ ಮುಂದೆ ಅವರ ಇಲಾಖೆಯ ಬೇಡಿಕೆಗಳನ್ನು ಏನು ಇಡುತ್ತಾರೆ ಈ ಇಲಾಖೆಯ ಬೇಡಿಕೆಗಳಿಗೆ ನಾವು ಸಹಕಾರವನ್ನು ಕೊಡುವುದಕ್ಕೆ ಸಿದ್ಧರಿಲ್ಲ ಏಕೆಂದರೆ ಅವರು ಸಹಕಾರ ಸಚಿವರಾದ ಮೇಲೆ ಸಹಕಾರೀ ರಂಗವನ್ನು ಕಾಂಗ್ರೆಸ್ ರಂಗವನ್ನಾಗಿ ಮಾಡಿದ್ದಾರೆ.

ಅಧ್ಯಕ್ಷರು.—ತಾವು ಬೇಡಿಕೆ ಮೇಲೆ ಮಾತನಾಡಿ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಅವರ ಬೇಡಿಕೆಯನ್ನು ಈ ಸಭೆಯು ಮುಂದೆ ಇಡುವುದಕ್ಕೆ ಸಹಕಾರ ಕೊಡುವುದಿಲ್ಲ ನಿನ್ನೆ ಮತ್ತು ಮೊನ್ನೆಯಿಂದ ಕೆಲವು ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈ ಸಭೆಯು ಮುಂದೆ ಏನು ಇಟ್ಟಿದ್ದರು ಅದಕ್ಕೆ ನಾವು ಸಹಕರಿಸಿದ್ದೇವೆ ಆದರೆ ಈ ಇಲಾಖೆಯ ಬೇಡಿಕೆಗಳನ್ನು ಈ ಸಭೆಯು ಮುಂದೆ ಇಡುವುದಕ್ಕೆ ನಾವು ಸಹಕಾರ ಕೊಡುವುದಿಲ್ಲ. ಮಾನ್ಯ ಸಹಕಾರ ಸಚಿವರು ಇಡೀ ಸಹಕಾರ ರಂಗವನ್ನು ತಮ್ಮ ಸ್ವಂತ ಸ್ವತ್ತನ್ನಾಗಿ ಮಾಡಿಕೊಂಡು ಒಂದು ಪಕ್ಷದ ರಾಜಕಾರಣಕ್ಕೆ ಅಧಿಕಾರವನ್ನು ಉಪಯೋಗ ಮಾಡಿದ್ದಾರೆ. ಈ ಸಹಕಾರ ರಂಗದಲ್ಲಿ ಒಂದು ಪಕ್ಷದ ರಾಜಕೀಯ ಕೂಡ ಇದೆಯೆಂದು ವಿಶಾದದಿಂದ ಹೇಳುತ್ತೇನೆ. ಈ ಇಲಾಖೆಯ ಬೇಡಿಕೆಯನ್ನು ಈ ಸಭೆಯು ಮುಂದೆ ಇಡುವುದಕ್ಕೆ ನಮ್ಮ ಸಹಕಾರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಈ ದೇಶದಲ್ಲಿ ೭೫ ವರ್ಷಗಳ ಕಾಲ ಸಹಕಾರ ಚಳುವಳಿಯನ್ನು ಬೆಳೆಸಬೇಕು ಎಂದು ಹೇಳಿ ಅನೇಕ ಜನರು ಶ್ರಮಿಸಿದ್ದಾರೆ. ಅದಕ್ಕೆ ಮಾನ್ಯ ರಂಗನಾಥ್‌ರವರು ಕೊಡಲಿ ಪೆಟ್ಟನ್ನು ಹಾಕಿದ್ದಾರೆಂದು ಹೇಳುತ್ತೇನೆ. ಒಂದು ಪಕ್ಷದ ರಾಜಕಾರಣವನ್ನು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಆದ್ದರಿಂದ ಇಲ್ಲಿ ಇದಕ್ಕೆ ಸಹಕಾರ ಕೊಡುವುದಕ್ಕೆ ನಾವು ತಯಾರು ಇಲ್ಲ. ನಾನು ಈ ರೀತಿಯ ವರ್ತನೆಯನ್ನು ಸಭೆಯ ಮುಂದೆ ಅನಿವಾರ್ಯವಾಗಿ ಮಾಡಬೇಕಾಗಿದೆ. ಅದಕ್ಕಾಗಿ ಈ ಸಭೆಯು ನನ್ನನ್ನು ಕ್ಷಮಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇವತ್ತು ನಮ್ಮ ಸಹಕಾರ ತಮಗೆ ದೊರೆಯಲಿಕ್ಕೆ ಸಾಧ್ಯವಿಲ್ಲ. ತಮ್ಮ ಬೇಡಿಕೆಯನ್ನು ಇಲ್ಲಿ ಮಂಡಿಸುವುದಕ್ಕೆ ನಾವು ಬಿಡುವುದಿಲ್ಲ. ಏಕೆಂದರೆ ೧೯೭೭ರ ಲೋಕಸಭೆಯ ಚುನಾವಣೆ ಆದಮೇಲೆ ಕರ್ನಾಟಕ ರಾಜ್ಯದಲ್ಲಿ ಸಂಮಾರು ೩೮.೮೦ರಷ್ಟು ಮತವನ್ನು ಕೊಟ್ಟಿದ್ದಾರೆ. ಅವರು ಸೊಸೈಟಿಗಳ ಬಾಗಿಲಿಗೆ ಹೋದರೆ ನೀವು ಜನತಾ ಪಕ್ಷಕ್ಕೆ ಓಟು ಕೊಟ್ಟಿದ್ದೀರಿ ; ನೀವು ದೇವೇಗೌಡರ ಮನೆಗೆ ಹೋಗಿರಿ. ಮುರಾರ್ಜಿದೇಸಾಯಿಯವರ ಮನೆಗೆ ಹೋಗಿರಿ ಎಂದು ಹೇಳಿದ್ದಾರೆ. ಆದ್ದರಿಂದ ನೀವು ಕಾಂಗ್ರೆಸ್ ಪಾರ್ಟಿಯಿಂದ ಮಂಜೂರಾತಿ ತೆಗೆದುಕೊಳಿರಿ. ಏಕೆಂದರೆ ಒಂದು ಪಕ್ಷದ ರಾಜಕಾರಣವನ್ನು ಮಾಡುವುದಕ್ಕೆ ಈ ಸಹಕಾರ ರಂಗವನ್ನು ಉಪಯೋಗಿಸಿಕೊಳ್ಳುವುದಕ್ಕೆ ನಾವು ಬಿಡುವುದಿಲ್ಲ ಇದು ಇಲ್ಲಿ ಇತ್ಯರ್ಥವಾಗಬೇಕು. ನಮ್ಮ ಮೇಲೆ ತಾವು ಯಾವ ರೀತಿಯ ಕ್ರಮವನ್ನಾದರೂ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಮೊದಲು ಮಾನ್ಯ ಸಚಿವರು ಡಿಮ್ಯಾಂಡನ್ನು ಮಂಡಿಸಲಿ.

† Sri K. H. Ranganath (Minister for Co-operation).—The hon. the Leader of the Opposition has got every right to say what he wants to say—I do not want to comment on that. What he said was, that

whenever people go to the Co-operative Societies, the Societies have been refusing to give loan and are asking them to go to the Janata Party or Shri Morarji Desai. That was his statement. With due respects to the hon. the Leader of the Opposition and with all humility I submit that I have not received a single letter from the hon. the Leader of the Opposition. He is making this allegation for the first time.

ಶ್ರೀ ಸಿ. ಬೈರೇಗೌಡ.—ಅವರಂ ನಿವಂಗೆ ಏತಕ್ಕೆ ಬರೆಯಂಬೇಕಂ ? ನಾನಂ ನಿವಂಗೆ ಬರೆದಂತಹ ಕಾಗದಗಳಂ ತಿಪ್ಪೆಯಲ್ಲಿ ಬಿದ್ದಿವೆ.

ಶ್ರೀ ಬಿ. ಪುಟ್ಟಸ್ವಾವಂಯ್ಯ.—ಕಾನೂನೇ ಗೊತ್ತಿಲ್ಲ ಇವರಿಗೆ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ.....

ಅಧ್ಯಕ್ಷರಂ.—ಬೈರೇಗೌಡರಂ, ಮಾತನಾಡಬಹುದು ಎಂದಂ ನಾನು ಕರೆದಿಲ್ಲ. ಅವರ ಲೀಡರ್ ಮಾತನಾಡುವುದಕ್ಕೆ ನಿಂತುಂಕೊಂಡಿದ್ದಾರೆ. ತಾವು ಮಧ್ಯೆವಂಧ್ಯೆ ಎದ್ದು ಮಾತನಾಡಿದರೆ ರೆಕಾರ್ಡ್ ಆಗುವುದಂ ಹೇಗೆ ?

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ನಾವು ಬರೆದ ಕಾಗದಗಳೆಲ್ಲಾ ತಿಪ್ಪೆಗೆ ಹಾಕಿದ್ದಾರೆ ಇವರು. ನಾನಂ ತೋರಿಸಿಕೊಡುಂತ್ತೇನೆ.

ಅಧ್ಯಕ್ಷರಂ.—ಯಾರಂ ತಿಪ್ಪೆಯಲ್ಲಿ ಹಾಕಿದ್ದಾರೆ.

ಸಿ. ಬೈರೇಗೌಡ.—ಮಂತ್ರಿಗಳು.

2-30 P.M.

† SRI K. H. RANGANATH.—I raise a point of order. I was only seeking your protection whether I enjoy the rights and privileges as a member of this House or not. Let not my friends Sri Byregowda address me in that fashion, If he wants to speak, let him seek your permission and speak I am not going to be cowed down by this threats. I know the rules of procedure. Let him charge to his heart content, I am prepared to answer him. Since the Leader of the Opposition made a reference to some societies, I was obliged to stand up. If the leader of the Opposition had written me a letter I would looked into the matter and set right the thing. Sri Byregowda had written me a letter about certain nominations. That is a different thing. If the demands are going to be discussed, it is for you to permit to move the demands, I shall do so. It is left to you. If the demands are moved, they will have abundent opportunity to say anything they want. It is only then I will be in a position to reply to them. With all humility I submit the Hon. Leader of the Opposition Sri Devegowda has not conveyed to me anything either orally or by a letter. If he had done so, I would have set right things. That is all my submission Madam Speaker.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯವರೇ, ಮಾನ್ಯ ಮಂತ್ರಿಗಳು ಹೇಳಿದ್ದನ್ನು ನಾನು ಒಪ್ಪುತ್ತೇನೆ. ನಾನು ಅವರಿಗೆ ಈ ವಿಷಯ ತಿಳಿಸಿಲ್ಲ. ಅದನ್ನು ತಿಳಿಸುವುದಕ್ಕೆ ನಾನು ಮನಸ್ಸು ಮಾಡಲಿಲ್ಲ. ಅವರು ತೆಗೆದುಕೊಂಡ ಧೋರಣೆ ಏನಿದೆ ಆ ಒಂದು ಕಾರಣದಿಂದ ನಾನು ಆ ಕೆಲಸವನ್ನು ಮಾಡಲಿಲ್ಲ. ನಾನು ಇಲಾಖೆಯ ಮಂತ್ರಿಗಳಿಗೆ ತಿಳಿಸಿದ್ದೇನೆ; ಜಿಲ್ಲಾಮಟ್ಟದ ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಪರ್ಸನಲ್ಲಾಗಿ ಹೋಗಿ ಭೇಟಿ ಮಾಡಿ ಹೇಳಿದ್ದೇನೆ. ಮಾನ್ಯ ಸಚಿವರಿಗೆ ತಿಳಿಸುವುದಕ್ಕೆ ನನ್ನ ಮನಸ್ಸಿಗೆ ಸಮಾಧಾನವಾಗಲಿಲ್ಲ. ಆದ್ದರಿಂದ ನಾನು ತಿಳಿಸಲಿಲ್ಲ. ಯಾತಕ್ಕೆಂದರೆ ತಾವು (ಮಾನ್ಯ ಸಹಕಾರ ಸಚಿವರು) ತೆಗೆದುಕೊಂಡ ಧಾಟಿ, ಹೋಗುತ್ತಾ ಇರತಕ್ಕ ಮಾರ್ಗ ಸರಿಯಲ್ಲ. ಇವತ್ತು ಕೇವಲ ಪಕ್ಷದ ರಾಜಕಾರಣ ಮಾಡುವುದಕ್ಕೆ ಸಹಕಾರಿ ರಂಗವನ್ನು ತಾವು ಉಪಯೋಗ ಮಾಡಿದ್ದೀರಿ. ಆದಕಾರಣ ನಾನು ತಮಗೆ ಈ ವಿಷಯ ತಿಳಿಸಲು ಇಚ್ಛೆ ಪಡಲಿಲ್ಲ ಇಲಾಖೆಯ ಮಂತ್ರಿಗಳಾದ ರಿಜಿಸ್ಟ್ರಾರ್ ಅವರಿಗೆ ತಿಳಿಸಿದ್ದೇನೆ. ಡೆಪ್ಯುಟಿ ರಿಜಿಸ್ಟ್ರಾರ್ ಅವರ ಹತ್ತಿರ ಮಾತನಾಡಿದ್ದೇನೆ. ಇವತ್ತಿನ ದಿವಸ ನಮ್ಮ ಜನ ಲೋನ್ ಕನ್‌ವರ್ಶನ್ ಮಾಡಲಿಕ್ಕೆ ಹೋದರೆ ಅದು ಸಾಧ್ಯವಾಗುತ್ತಿಲ್ಲ. ಲೋನ್ ಅಪ್ಲಿಕೇಶನ್ ನೋಡುವ ಇಚ್ಛೆ ತಮಗಿಲ್ಲ; ಇದು ಇಡೀ ರಾಜ್ಯದಲ್ಲಿ ಇರತಕ್ಕ ಸಮಸ್ಯೆ. ಯಾವುದೇ ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟ ಸಮಸ್ಯೆಯಲ್ಲ. ಇವತ್ತು ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಅಮಾಲ್ಗಮೇಷನ್ ಆಗಿಲ್ಲ. ಯಾತಕ್ಕೆ ಆಗಿಲ್ಲ? ಸಹಕಾರಿ ಕ್ಷೇತ್ರ ದೇಶದಲ್ಲಿ ವೇಗವಾಗಿ ಕೆಲಸ ಮಾಡಬೇಕು, ವೀಕರ್ ಸೆಕ್ಷನ್‌ಗಳಿಗೆ, ಪೆಡ್ಯೂಲ್ಡ್ ಕ್ಯಾಸ್ಟ್‌ಗೆ, ಸಮಾಜದಲ್ಲಿ ಇರತಕ್ಕ ಬಡವರಿಗೆ ಸಹಾಯ ಮಾಡಬೇಕು ಎಂಬ ವಾದವನ್ನು ಮಂಡಿಸಿ ನಾಲ್ಕಾರು ತಿದ್ದುಪಡಿಗಳನ್ನು ತಂದು ಮಂಜೂರಾತಿ ಪಡೆದು ಕೆಲಸ ಮಾಡತಕ್ಕ ಕಾಲದಲ್ಲಿ ಈ ರೀತಿ ಮಾಡಿದರೆ ಹೇಗೆ ? ಕಳೆದ ಒಂದು ವರ್ಷದಿಂದ ಯಾತಕ್ಕೆ ಪೂರ್ತಿ ಅಮಾಲ್ಗಮೇಷನ್ ಆಗಿಲ್ಲ. ಧಾರವಾಡ ಜಿಲ್ಲೆಯಲ್ಲಿ ಯಾತಕ್ಕೆ ಆಗಿಲ್ಲ ? ತಮ್ಮ ಕ್ಷೇತ್ರದಲ್ಲಿ ಯಾತಕ್ಕೆ ಇನ್ನೂ ಅಮಾಲ್ಗಮೇಷನ್ ಆಗಿಲ್ಲ. ನೀವು ಸಹಕಾರಿ ಕ್ಷೇತ್ರವನ್ನು ರಾಜಕಾರಣಕ್ಕೋಸ್ಕರವಾಗಿ ಉಪಯೋಗ ಮಾಡುವುದಾದರೆ ನಾವು ಹಣವನ್ನು ನಿಮ್ಮ ಹತ್ತಿರ ಕೊಡುವುದಕ್ಕೆ ತಯಾರಾಗಿಲ್ಲ. ಅದಕ್ಕೆ ನಮ್ಮ ಅಸಹಕಾರ ಇದೆ. ನಾವು ಏನೇ ಮಾಡಿದರೂ ಕೂಡ ಈ ಸಹಕಾರ ಇಲಾಖೆ ಬೇಡಿಕೆ ಮಂಡಿಸುವುದಕ್ಕೆ ಬಿಡುವುದಿಲ್ಲ, ಮತ್ತು ನಾವು ನಮ್ಮ ಸಹಕಾರ ಕೊಡುವುದಕ್ಕೆ ತಯಾರಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈಗ ಸಹಕಾರಿ ಇಲಾಖೆಯಲ್ಲಿ ಸಹಕಾರ ಸಂಘಗಳ ಪುನರ್ವಿಂಗಡಣೆ ಮಾಡಿ ಒಂದು ಸ್ವರೂಪವನ್ನು ಕೊಟ್ಟು, ಸರ್ಕಾರದವರು ಏನು ಒಂದು ಗೈಡ್‌ಲೈನ್ ಹಾಕಿಕೊಂಡಿದ್ದಾರೆ ಅವರ ಪ್ರಕಾರ ತಾವು ಮಾಡಿ ಎಂದು ಹೇಳಿದ್ದೀವೆ, ಮಾಡಬಾರದು ಎಂದು ಹೇಳಿಲ್ಲ. ಇವತ್ತು ಸ್ಥಳೀಯ ಅಧಿಕಾರಿಗಳು ಮತ್ತು ಡೆಪ್ಯುಟಿ ರಿಜಿಸ್ಟ್ರಾರ್‌ಗಳು ಕಾಂಗ್ರೆಸಿನವರು ಹೇಳಿರುವ ರೀತಿಯಲ್ಲಿ ಹೆಜ್ಜೆ ಹಾಕಿ ಆ ಸಹಕಾರಿ ರಂಗವನ್ನು ಕಲಂಗೆಡಿಸಿದ್ದಾರೆ. ಲ್ಯಾಂಡ್ ಟ್ರಿಬ್ಯೂನಲ್‌ಗಳನ್ನು ರಚನೆ ಮಾಡುವಾಗ ಪಕ್ಷಾತೀತವಾಗಿ ಪ್ರಾಮಾಣಿಕವಾಗಿ ಮಾಡಿ ಎಂದು ಹೇಳಿದ ಮಾತನ್ನು ಕೇಳದೆ ಕೇವಲ ಇವರ ಪಾರ್ಟಿಯವರನ್ನೇ ಇಡೀ ಕರ್ನಾಟಕ ರಾಜ್ಯದಲ್ಲಿ ಟ್ರಿಬ್ಯುನಲ್‌ಗಳಲ್ಲಿ ಹಾಕಿದ್ದಾರೆ. ಇದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಮೊನ್ನೆ ದಿವಸ ನಾನು ಬರಬೇಕಾದರೆ ನೋಡಿದೆ ೨೫–೩೦ ವರ್ಷದಿಂದ ಜಮೀನು ಸಾಗುವಳಿ ಮಾಡಿರತಕ್ಕ ಮನುಷ್ಯ ಜಮೀನು ಕಳೆದುಕೊಂಡವನು ಬಂದು ಕಾಲು ಹಿಡಿದು ಕೊಂಡ. ಆ ಒಂದು ದೃಶ್ಯವನ್ನು ನೋಡಿದಾಗ ಎದೆ ಜಲ್ ಎನ್ನುತ್ತದೆ. ಸಹಕಾರ ಸಂಘಗಳಲ್ಲಿ ನಾಮಿನೇಷನ್ ಮಾಡುವಾಗ ಅತ್ಯಂತ ಭ್ರಷ್ಟರನ್ನು ಸಹಕಾರ ಸಂಘದಲ್ಲಿ ಲೂಟಿ ಹೊಡೆದು ಹೆಬ್ಬುಲಿ ಯಾಗಿರತಕ್ಕವರನ್ನು ಹಾಕಿದ್ದಾರೆ. ಸಹಕಾರ ಸಂಘಗಳ ಪುನರ್ವಿಂಗಡಣೆಯಿಂದ ಇದು ಬಗೆಹರಿಯಬೇಕಿತ್ತು, ದುರ್ಬಲವರ್ಗದವರಿಗೆ ಪ್ರಾತಿನಿಧ್ಯ ಸಿಗಬೇಕಿತ್ತು, ಭ್ರಷ್ಟಾಚಾರಿಗಳನ್ನು ತೆಗೆಯಬೇಕಾಗಿತ್ತು ಎಂಬ ಭಾವನೆ ಇಟ್ಟುಕೊಂಡಿದ್ದೆವು. ಆದರೆ ಈಗ ಯಥಾವತ್ತಾಗಿ ತೀರಾ ಭ್ರಷ್ಟಾಚಾರಿಗಳನ್ನು ನಾಮಿನೇಷನ್ ಮಾಡಿ ಅವರ ಕೈಯಲ್ಲಿ ಸಹಕಾರ ಸಂಘಗಳನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ ಇದರಿಂದ ಸಹಕಾರ ಸಂಘಗಳು ಸಂಪೂರ್ಣವಾಗಿ ಮಂಗಳುಗಿಹೋಗಿವೆ. ಈ ರೀತಿ ಸಹಕಾರ ಸಂಘಗಳಲ್ಲಿ ನಾಮಿನೇಷನ್ ಮಾಡಿದವುಗಳಲ್ಲಿ ೮–೯ ಜನ ಡಿಫಾಲ್ಟರ್ ಆಗಿರುವವರನ್ನು ಯಾತಕ್ಕೆ ಇಟ್ಟುಕೊಂಡಿದ್ದೀರಿ. ಅವರನ್ನು ತೆಗೆದುಹಾಕಿರಿ ಎಂದು ಆಡಿಟರ್‌ರವರು ಹೇಳಿದರೆ ಮಂಖ್ಯಮಂತ್ರಿಗಳ ಕಚೇರಿಯಿಂದ ಡೆಪ್ಯುಟಿ ರಿಜಿಸ್ಟ್ರಾರ್‌ಗೆ ಫೋನ್ ಮಾಡಿ ಈ ಆಡಿಟರ್ ಬೇಡ ಬೇರೆ ಆಡಿಟರನ್ನು ನೇಮಿಸಿ ಎಂದು ಭದ್ರಾವತಿಯಿಂದ ಕರೆಸಿ ನೇಮಕ ಮಾಡಿದ್ದಾರೆ. ಇವತ್ತಿನ ದಿವಸ ಸಹಕಾರ ಸಂಘಗಳನ್ನು ಪುನರ್ವಿಂಗಡಣೆ ಮಾಡಿ ಅವುಗಳನ್ನು ಕಾಂಗ್ರೆಸ್ ಕಚೇರಿಗಳನ್ನಾಗಿ ಮಾಡಿದ್ದಾರೆ. ಸೊಸೈಟಿಗಳಲ್ಲಿ ಅಲ್ಪಸ್ವಲ್ಪ ಹಣ ಉಳಿದಿದ್ದರೆ ಅದನ್ನು ತಿಂದುಹಾಕುವುದಕ್ಕೆ ಹೊರಟಿದ್ದಾರೆ.

ಅಧ್ಯಕ್ಷರಂ.—ಡಿಮ್ಯಾಂಡ್ ಮಂಂಡಿಸಲಿ ಬಿಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಮುಂಡಿಸಿ ಏನು ಮಾಡಬೇಕು? ಇಂಥ ಪರಿಸ್ಥಿತಿಗೆ ಇವತ್ತು ಬಂದಿದ್ದಾರೆ. ಹಿಂದೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಂ ಮಾರ್ಕೆಟಿಂಗ್ ಫೆಡರೇಷನ್ ವೇಲೆ ರಿಪೋರ್ಟ್ ಕೊಟ್ಟಿದ್ದು ಇದೇ ಬೇಡಿಕೆ ಚರ್ಚೆ ಮಾಡತಕ್ಕ ಕಾಲದಲ್ಲಿ ರಿಪೋರ್ಟ್ ಕೊಟ್ಟಿದ್ದರೂ ಕೂಡ ಸರ್ಕಾರ ಕಾನೂನಂಬದ್ಧವಾಗಿ ಕ್ರಮಂ ಕೈಗೊಂಡಿಲ್ಲ ಎಂದಂ ಹೇಳಿ ಗಂಟಲಂ ಶೋಷಣೆ ಮಾಡಿದರೂ ಏನು ಪ್ರಯೋಜನವಾಗಲಿಲ್ಲ. ಈ ದಿವಸ ಮತ್ತೆ ಇದೇ ಬೇಡಿಕೆ ಚರ್ಚೆ ಮಾಡತಕ್ಕ ಕಾಲಕ್ಕೆ ಬಂದಿದ್ದೇವೆ. ಮಾರ್ಕೆಟಿಂಗ್ ಫೆಡರೇಷನ್ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ.....

ಅಧ್ಯಕ್ಷರಂ.—ಇದನ್ನೆಲ್ಲಾ ಡಿಮ್ಯಾಂಡ್ ಮಂಂಡಿಸಿದ ಮೇಲೆ ಮಾತನಾಡಬಹುದಂ.

ಶ್ರೀ ಕಾಗೋಡು ತಿಮ್ಮಪ್ಪ:—ಇವರಂ ಏನು ಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳದೇ ಏನು ಮಾತನಾಡಂವುದು? ಅಲ್ಲಿ ಅಲ್ಪಸ್ವಲ್ಪ ಲೂಟಿಯಾಗಿಲ್ಲ. ಹಿಂದಿನ ಸಭೆಯಲ್ಲಿ ಸರ್ಕಾರ ಏನಂ ಭರವಸೆ ಕೊಟ್ಟಿತ್ತು, ಅದರ ಪ್ರಕಾರ ಏನಾದರೂ ನಡೆದುಕೊಂಡಿದ್ದರೆ ನಾವು ಇವತ್ತು ಈ ರೀತಿ ಮಾತನಾಡುವ ಸನ್ನಿವೇಶ ಬರುತ್ತಿರಲಿಲ್ಲ. ಇವತ್ತು ಸಂಮ್ಮನೆ ಮಂಡಿಸಿದರೆ ಏನಂ ಪ್ರಯೋಜನ ?

†Sri Nazeer Ahmed Siddiqui (Raichur).–Madam Speaker, I have been a silent spectator for a very long time. But the speeches Mr. Kagodu Thimmappa and the Leader of the Opposition made me speak I could understand that it is due to inadequate knowledge of Kannada language and also the Parliamentary procedure. But I am surprised to see how the Hon'ble Leader of the Opposition could hold the entire House into ransom I am not sure whether he has got the right to stop the proceedings of the House. Before the Demands are put forward, the Members of the Opposition are trying to stop it. I am sure the Leader of the Opposition will enlighten me. We have got every opportunity to express our views. But I don't think we have right to threaten and stop the proceedings of the House. Therefore, I want an answer whether the Members of the Opposition could stop the presentation of the Demands.

ಶ್ರೀ ಕಾಗೋಡು ತಿಮ್ಮಪ್ಪ,—ಇವತ್ತು ನಾವು ಈ ಆಕ್ಷೇಪಣೆ ಎತ್ತುವುದಕ್ಕೆ ಕಾರಣ ಏನೆಂದರೆ ಅಂಥ ಪರಿಸ್ಥಿತಿ ಇಂದಂ ನಮ್ಮ ರಾಜ್ಯದಲ್ಲಿ ಉಂಟಾಗಿದೆ. ದಾರವಾಡ ಜಿಲ್ಲೆಯಲ್ಲಿ ಏಕೆ ಸೊಸೈಟಿಗಳನ್ನು ಪುನರ್ ಸಂಘಟನೆ ಮಾಡಲಿಲ್ಲ, ಮತ್ತು ಇನ್ನೂ ಹಲವಾರಂ ಕಡೆಗಳಲ್ಲಿ ಏಕೆ ಮಾಡಲಿಲ್ಲ? ಅದಕ್ಕೆ ಕಾರಣವೇನು, ಹಾಗಾದರೆ ನಾವು ಮಾಡಿದ್ದು ಏನಂ, ನೀವು ಮಾಡಿದ್ದು ಏನು, ಆ ಒಂದು ವ್ಯವಸ್ಥೆಯನ್ನು ಸರ್ಕಾರದವರಂ ಸರಿಯಾಗಿ ಕಾರ್ಯಗತಮಾಡಲಿಲ್ಲ, ಕೆಲವು ಕಡೆ ಮಾಡಿದರೂ ಅದಂ ಸಮರ್ಪಕವಾಗಿ ಆಗಲಿಲ್ಲ. ಸಹಕಾರ ಸಂಘಗಳಲ್ಲಿ ನಾಮಿನೇಷನ್ ಮಾಡಂವಾಗ ಕಾಂಗ್ರೆಸ್ಸಿನವರನ್ನೇ ಮಾಡಿದ್ದಾರೆ. ಎಲ್ಲ ಕಡೆಯಲ್ಲಿಯೂ ಕಾಂಗ್ರೆಸ್ಸಿನವರೇ ಸಹಕಾರ ಸಂಘಗಳಲ್ಲಿ ಸದಸ್ಯರು ಮತ್ತು ಡೈರೆಕ್ಟರುಗಳಾಗಿರುವುದರಿಂದ ಯಾವುದೇ ಅಧಿಕಾರಿಯಂ ಅವರನ್ನು ಮಂಂಟ್ಯುವಹಾಗಿಲ್ಲ, ಕೇಳುವ ಹಾಗಿಲ. ಒಂದು ವೇಳೆ ಏನಾದರೂ ಕೇಳಿದರೆ ಸಹಕಾರ ಮಂತ್ರಿಗಳಿಂದ ಹೇಳಿಸುತ್ತೇವೆ, ಮಂಖ್ಯ ಮಂತ್ರಿಗಳಿಂದ ಹೇಳಿಸುತ್ತೇವೆಂದು ಹೇಳುತ್ತಾರೆ. ಹೀಗಾಗಿ ಎಲ್ಲ ಸಹಕಾರ ಸಂಘದ ಅಧಿಕಾರಿಗಳು ಕಾಂಗ್ರೆಸ್ ಪಕ್ಷಕ್ಕೆ ಭಯ ಬಿದ್ದು ಏನು ಕೆಲಸವನ್ನು ಮಾಡದೆ ಇರತಕ್ಕ ಪರಿಸ್ಥಿತಿಗೆ ಬಂದಿದ್ದಾರೆ. ಹೀಗಾಗಿ, ಸಹಕಾರ ಸಂಘಗಳಿಂದ ಏನು ಹೊಸದಾಗಿ ಪ್ರಯೋಜನವಾಗಬೇಕಿತ್ತು, ಯಾವ ಯಾವ ಸಂಘಗಳನ್ನು ಪುನರ್ ಸಂಘಟನೆ ಮಾಡಬೇಕಿತ್ತು ಅದಕ್ಕೆ ಬದಲಾಗಿ ಅವುಗಳ ಆಡಳಿತ ಕುಸಿದು ಬಿದ್ದಿದೆ.

ಅಧ್ಯಕ್ಷರಂ.—ತಾವು ಇಷ್ಟು ದೊಡ್ಡ ಪ್ರಶ್ನೆಯನ್ನು ಡಿಮ್ಯಾಂಡ್ ಮಂಂಡಿಸಿದ ಮೇಲೆ ಕೇಳುವುದಂ ಉಚಿತ ಅಲ್ಲವೆ?

ಶ್ರೀ ಕಾಗೋಡು ತಿಮ್ಮಪ್ಪ.—ಇವತ್ತು ಸಹಕಾರ ಸಂಘಗಳ ಮ್ಯಾನೇಜ್‌ಮೆಂಟನ್ನು ಕೂಡ ಕಾಂಗ್ರೆಸ್ಸಿನವರೇ ನಡೆಸಬೇಕೆಂದು ತೀರ್ಮಾನ ಮಾಡಿಕೊಳ್ಳಲಿ, ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲ, ಆದರೆ ಇವರು ನಾಮಿನೇಷನ್ ಮಾಡುವಾಗ ಕೇವಲ ಕಾಂಗ್ರೆಸ್ಸಿನವರನ್ನೇ ನಾಮಿನೇಟ್ ಮಾಡಿ ಬೇರೆ ಯವರೆನ್ನು ಏಕೆ ಕೈಬಿಟ್ಟಿದ್ದಾರೆಂದು ಕೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ದುರ್ಬಲವರ್ಗದವರಿಗೆ ಭಾರಿ ಅನುಕೂಲ ಮಾಡಿಕೊಟ್ಟಿದ್ದೇವೆಂದು ಹೇಳುತ್ತಾರೆ. ಇವತ್ತು ಅವರು ಎಷ್ಟು ಮಂದಿ ದುರ್ಬಲ ವರ್ಗದವರನ್ನು ನಾಮಿನೇಟ್ ಮಾಡಿದ್ದಾರೆಂಬ ಬಗ್ಗೆ ಅಂಕಿ ಅಂಶಗಳನ್ನು ಕೊಡಲಿ, ಕೇವಲ ಕಾಂಗ್ರೆಸ್ಸಿನವ ರನ್ನು ಮಾಡಿದ್ದಾರೆಯೇ ಹೊರತು ಬೇರೆ ಯಾರನ್ನೂ ಮಾಡಿಲ್ಲ. ಸಹಕಾರ ಸಂಘಕ್ಕೆ ಕಾಂಗ್ರೆಸ್ಸಿನವರೆ ಮೀಸಲಾಗಿದ್ದರೆ ನಾವು ಏಕೆ ಇರಬೇಕು? ನಾವು ಏಕೆ ಈಗ ಈ ಸಹಕಾರ ಸಂಘಗಳ ಬೇಡಿಕೆಯ ಚರ್ಚೆಯಲ್ಲಿ ಪಾಲ್ಗೊಳ್ಳಬೇಕು? ಇದು ಮೂಲಭೂತವಾದ ಪ್ರಶ್ನೆ. ಸಹಕಾರ ಸಂಘ ಕ್ಷೇತ್ರದಲ್ಲಿ ರಾಜಕೀಯ ಮಾಡ ಬೇಕೆಂಬ ಉದ್ದೇಶ ಇದ್ದರೆ ನಾವು ನೇರವಾಗಿ ರಾಜಕೀಯ ಮಾಡುತ್ತೇವೆಂದು ತೀರ್ಮಾನ ಮಾಡಲಿ. ನಮಗೆ ಶಕ್ತಿ ಇದ್ದರೆ ನಾವು ನೋಡುತ್ತೇವೆ, ಅವರಿಗೆ ಶಕ್ತಿ ಇದ್ದರೆ ಅವರು ನೋಡಲಿ. ಆ ರೀತಿ ಮಾಡುವುದಾದರೆ ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಅದನ್ನು ಬಿಟ್ಟು ಹಿಂಬದಿಯಿಂದ ಪಕ್ಷ ಬೆಳೆಸುವ ಪ್ರವೃತ್ತಿಗೆ ಕೈಹಾಕಬೇಡಿ.

ಶ್ರೀ ಡಿ.ಬಿ. ಕಲ್ಮಣ್‌ಕರ್.—ಮಾನ್ಯ ಅಧ್ಯಕ್ಷರೇ, ರೂಲ್ 295ರ ಅಡಿ ಏನು ಹೇಳುತ್ತದೆಂದರೆ.....

(೪–೬ ಮಂದಿ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡಿದರು)

ಅಧ್ಯಕ್ಷರು.—ಎಲ್ಲರೂ ಸ್ವಲ್ಪ ಕುಳಿತುಕೊಳ್ಳಬೇಕು. ಈಗ ನೀವು ಡಿಮ್ಯಾಂಡ್ ಮಂಡಿಸುವುದಕ್ಕೇ ಬಿಡದೆ ವಾತಾವರಣ ಏನು ಪ್ರಯೋಜನ? ಇಷ್ಟೆಲ್ಲ ಗಲಾಟೆ ಮಾಡಿ, ಕೊನೆಗೆ ಡಿಮ್ಯಾಂಡ್ ಮಂಡನೆ ಮಾಡಿಸಿ ಓಟ್ ಹಾಕಿ ಹೋಗುವ ಪರಿಸ್ಥಿತಿ ಬರುತ್ತದೆ.

ಶ್ರೀ ಎಚ್.ಡಿ. ದೇವೇಗೌಡ—ಈಗಾಗಲೇ ವಿರೋಧ ಪಕ್ಷದವರೆಲ್ಲರನ್ನು ಸಹಕಾರಿ ರಂಗದಿಂದ ಕಿತ್ತು ಹಾಕಿದ್ದೀರಿ. ಈ ಮನೆ ಏನೇನು ಕಾರ್ಯಕ್ರಮದ ನಿಯಮಾವಳಿಗಳನ್ನು ಮಾಡಿದೆಯೋ ಅದಕ್ಕೆ ವಿರೋಧವಾಗಿ ನೀವು ನಡೆದಿದ್ದೀರಿ.

ಶ್ರೀ ಕೊಣಂದೂರು ಲಿಂಗಪ್ಪ.—ಗೆಳೆಯ ರಂಗನಾಥ್‌ರವರು ಸಹಕಾರಿ ರಂಗಕ್ಕೆ ಬಂದಮೇಲೆ ಸಹ ಕಾರಿ ರಂಗದ ಕಾರ್ಯಕಲ್ಪಗಳ ಬಗ್ಗೆ ಹೆಚ್ಚಿನ ಗಮನ ನೀಡುವುದು ಅಗತ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಕಳೆದ ಅಧಿವೇಶನದಲ್ಲಿ, ಈ ಸಹಕಾರಿ ರಂಗದಲ್ಲಿ ಎಷ್ಟು ಲೋಪದೋಷಗಳಿವೆ ಎಂಬುದನ್ನು ಹೇಳಿದ್ದೆವು. ಫೆಡರೇಷನ್ ಬಗ್ಗೆ, ಹಾಗೂ ಪ್ರತಿಯೊಂದು ವಿಷಯದ ಬಗ್ಗೆಯೂ ಸಹ ಹೇಳಿದ್ದೆವು. ಆದರೆ ಇದುವರೆಗೆ ಅಲ್ಲಿ ಯಾವ ನ್ಯೂನತೆಗಳನ್ನು ತಿದ್ದುಪಡಿ ಮಾಡಿಲ್ಲ.

ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ).—ಕ್ರಿಯಾಲೋಪವನ್ನು ಹೇಳುತ್ತೇನೆ.....

ಶ್ರೀ ಕಾಗೋಡು ತಿಮ್ಮಪ್ಪ.—ನಿಮ್ಮ ಗುಬ್ಬಿ ಸೊಸೈಟಿ ಏನಾಯಿತು?

(೪–೬ ಮಂದಿ ಎದ್ದು ನಿಂತು ಮಾತನಾಡತೊಡಗಿದರು)

ಅಧ್ಯಕ್ಷರು.—ಅವರು ಕ್ರಿಯಾಲೋಪ ಎತ್ತಿದ್ದಾರೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಗಟ್ಟಿಚಂದ್ರಶೇಖರ್.—ನಾನು ಕ್ರಿಯಾಲೋಪವನ್ನು ಎತ್ತಿದರೂ ನೀವು ಮಾತನಾಡುತ್ತೀರಲ್ಲ ನಿಮಗೆ ಏನು ಹೇಳಬೇಕು? ಇನ್ನೂ ಡಿಮ್ಯಾಂಡ್ ಮಂಡಿಸಿಲ್ಲ. ಹಿಂದೆ ಎಲ್ಲ, ಮೊದಲು ಡಿಮ್ಯಾಂಡನ್ನು ಮಂಡಿಸಿ ಚರ್ಚೆ ಮಾಡುತ್ತಿದ್ದರೆ ಇವತ್ತಿನ ದಿವಸ ಬದಲಾವಣೆಯಾಗಿದೆ. ಹಾಗಾದರೆ ಚರ್ಚೆಯಾದ ಮೇಲೆ ಮಂಡಿಸುವುದೇ? ಅವರುಗಳು ಡಿಮ್ಯಾಂಡ್ ಮಂಡಿಸಿದ ಮೇಲೆ ಇಷ್ಟ ಇದ್ದರೆ ಚರ್ಚೆಯಲ್ಲಿ ಭಾಗವಹಿಸಲಿ, ಇಲ್ಲದಿದ್ದರೆ ಹೋಗಲಿ, ಓಟ್ ಮಾಡಲಿಕ್ಕೆ ನಾವು ಇದ್ದೇವೆ. ನೀವುಗಳು ಇವತ್ತು ಹೊಸದಾಗಿ ಬಂದಿರುವ ಹಾಗೆ ಆಡುತ್ತಿದ್ದೀರಲ್ಲ, ಹಳ್ಳಿಯ ಜನರು ಪಂಚಾಯಿತಿಗಳಲ್ಲೂ ಸಹ ಈ ತರಹ ಮಾಡುವುದಿಲ್ಲ.

ಶ್ರೀ ಟಿ.ಎಂ. ವಂಜಿನಾಥ್.—ನಿಮ್ಮ ಪಕ್ಷದವರು ಪಂಚಾಯಿತಿಯವರು ಸಹ ಮಾಡದೆ ಇರತ ಕ್ಕಂತಹ ಕೆಲಸಗಳನ್ನು ಮಾಡುತ್ತಿದ್ದೀರಿ.

ಶ್ರೀ ಬಿ. ಪುಟ್ಟಸ್ವಾವಯ್ಯ —ಸರ್ಕಾರ ನಡೆಸಿ, ಆಡಳಿತ ನಡೆಸಿ ಎಂದು ನಿಮ್ಮನ್ನು ಮಂತ್ರಿಗಳನ್ನು ಮಾಡಿ ನಾವು ಸುಮ್ಮನೆ ಕುಳಿತುಕೊಳ್ಳಬಹುದೆ?

ಅಧ್ಯಕ್ಷರು —ಇವತ್ತು ಮಾನ್ಯ ಸದಸ್ಯರುಗಳು ಈ ರೀತಿ ಮಾತನಾಡಿರುವುದೆಲ್ಲವನ್ನು ಎಕ್ಸ್‌ಪಂಜ್ ಮಾಡಿಸಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಚಂದ್ರಶೇಖರ್ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಇಲ್ಲಿ ಸದಸ್ಯರುಗಳು ಪಂಚಾಯತಿಯಲ್ಲಿ ಕೆಲಸ ಮಾಡಿದ ಹಾಗೆ ಮಾಡುತ್ತಿದ್ದಾರೆಂದು ಅವರು ಹೇಳಿದ್ದಾರೆ. ಇದೇ ಸದಸ್ಯರು ಎರಡು ವರ್ಷದ ಹಿಂದೆ ತಮ್ಮ ಗುಂಬ್ಬಿ ಸೊಸೈಟಿಯಲ್ಲಿ ಏನಾಗಿದೆ ಎನ್ನುವುದರ ಬಗ್ಗೆ ಇದೇ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರು ಎತ್ತಿದಂಥ ವಿಷಯಕ್ಕೆ ಅವರು ಏನಾದರೂ ಪರಿಹಾರವನ್ನು ಕಂಡಿದ್ದಾರೆಯೇ?

ಶ್ರೀ ಗಟ್ಟಿ ಚಂದ್ರಶೇಖರ್.—ಹೋದ ವರ್ಷ ಇದೇ ಸಭೆಯಲ್ಲಿ ಈ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಈಗಾಗಲೇ ಮಂತ್ರಿಗಳು ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ಆಲ್ಲಿ ಎರಡೂವರೆ ಲಕ್ಷ ರೂಪಾಯಿಗಳ ಲಂಕ್ಸನು ಆಗಿದೆ ಎಂದು ಕಂಡು ಹಿಡಿದು ಕೆಲವರನ್ನು ಅರೆಸ್ಟ್‌ಮಾಡಿ ಸಸ್ಪೆಂಡ ಮಾಡಿದ್ದಾರೆ. ಅದಕ್ಕಿಂತ ಏನು ಮಾಡಬೇಕಾಗಿತ್ತು? ಆದ್ದರಿಂದ ನಾನು ಸಹಕಾರ ಮಂತ್ರಿಗಳು ಮಂಡಿಸತಕ್ಕ ಡಿಮ್ಯಾಂಡ್ ಬಗ್ಗೆ ಮಾತನಾಡುವುದಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ರಂಗನಾಥ ಅವರು ಬಂದಮೇಲೆ ಸಹಕಾರಿ ರಂಗಕ್ಕೆ ಕಾಯಕಲ್ಪ ಆಗುವುದರ ಬದಲು ಪ್ರತಿಯೊಂದು ಸೊಸೈಟಿಯಲ್ಲಿಯೂ ಕಾಂಗ್ರೆಸ್ಸಿನವರ ಕಲ್ಪವೃಕ್ಷ ಬೆಳೆದಿದೆ. ಇವತ್ತು ಯಾವ ಸೊಸೈಟಿಗೆ ಹೋದರೂ ಕೂಡ ಅವರ ಜನರೇ ಇದ್ದಾರೆ.

ಶ್ರೀ ಎಚ್ ಡಿ. ದೇವೇಗೌಡ.—ಧಾರವಾಡ ಜಿಲ್ಲೆಯ ಬಗ್ಗೆ ಇನ್ನೂ ನಾಮಿನೇಷನ್ ಆಗಿಲ್ಲ. ಅಲ್ಲಿ ಸೊಸೈಟಿಗಳು ಕೆಲವೇ ವ್ಯಕ್ತಿಗಳ ಸ್ವತ್ತಾಗಿವೆ.

ಶ್ರೀ ಕೋಣಂದೂರು ಲಿಂಗಪ್ಪ.—ಇವರು ನಾಮಕರಣ ಮಾಡುವಂಥ ಸಮಯ ಯಾವುದು ಎಂದರೆ, ತುರ್ತುಪರಿಸ್ಥಿತಿ. ಆಗ ಯಾರೂ ವಿರೋಧಪಕ್ಷದವರು ಇರಲಿಲ್ಲ, ಇನ್ನು ಮುಂದೆ ಅವರು ಇರುವುದಿಲ್ಲ ಎಂದು ತಿಳಿದು ತಮ್ಮ ಸರ್ವಾಧಿಕಾರದಿಂದಲೇ ಆಡಳಿತ ನಡೆಸುತ್ತೇವೆಂದು ಬರೀ ಕಾಂಗ್ರೇಸ್ಸಿನವರ ಹೆಸರನ್ನು ತುರುಸಿಕೊಂಡು ಸೊಸೈಟಿಗಳಿಗೆ ನಾಮಕರಣ ಮಾಡಿದರು, ಯಾರು ಯೂತ್ ಕಾಂಗ್ರೆಸ್ ಸೇರಿದ್ದರು. ಯಾರು ಕಾಂಗ್ರೆಸ್‌ನವರು ಇದ್ದರು ಅವರನ್ನೆ ಎಲ್ಲಾ ಕಮಿಟಿಯಲ್ಲಿ ಹಾಕಿದ್ದಾರೆ. ಹಿಂದೆಯೂ ನಾವು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆವು. ಭೂನ್ಯಾಯಾಧಿಕರಣದಲ್ಲಿ ಕೇವಲ ಕಾಂಗ್ರೆಸ್ಸಿನವರನ್ನೇ ಹಾಕಬೇಡಿ ಎಂದು ಹೇಳಿದ್ದೆವು. ಆದರೂ ಇದುವರೆಗೆ ಅದು ಯಾವ ರೀತಿಯಿಂದ ಇತ್ಯರ್ಥವಾಗದೆ ಉಳಿದು ಟ್ರಿಬ್ಯುನಲ್‌ನಲ್ಲಿದ್ದ ಮಾನ್ಯ ಪಿ.ಸಿ. ಶೆಟ್ಟರ್ ಅವರಂಥ ಸಮಾಜವಾದಕ್ಕೆ ಅರ್ಪಣೆ ಮಾಡಿಕೊಂಡ ವರನ್ನು ಟ್ರಿಬ್ಯುನಲ್‌ನಿಂದ ತೆಗೆಯುವಂಥ ಮಟ್ಟಕ್ಕೆ ಹೋಗಿದ್ದಾರೆ. ಯಾರು ಗೇಣಿದಾರರ ಪರವಾಗಿ ಇದ್ದರು ಯಾರಿಗೆ ಈ ಕಾನೂನಿನ ಬಗ್ಗೆ ಹೆಚ್ಚಿನ ಆಸಕ್ತಿ ಇತ್ತು ಅಂಥವರನ್ನು ತೆಗೆದುಹಾಕಿದ್ದಾರೆ. ಇಡೀ ರಾಜ್ಯದಲ್ಲಿ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿರತಕ್ಕ ಎಲ್ಲಾ ಸೊಸೈಟಿಗಳಿಗೂ ಕಾಂಗ್ರೆಸ್ಸಿನವರನ್ನೇ ಹಾಕಿದ್ದಾರೆ. ಸರ್ಕಾರದಿಂದ ಸರಿಯಾದ ಪ್ರಪೋಷನಲ್ ರೆಪ್ರಸೆಂಟೇಷನ್ ಇದರ ಬಗ್ಗೆ ವಿರೋಧಪಕ್ಷದವರಿಗೂ ಕೊಡುವವರೆಗೆ. ಮುಂತ್ತು ಇಂಥ ಒಂದು ಆಶ್ವಾಸನೆಯನ್ನು ನಮಗೆ ಆವರು ಕೊಡುವವರೆಗೆ ಈ ಬೇಡಿಕೆ ಯನ್ನು ನಾವು ಮಂಡನೆ ಮಾಡುವುದಕ್ಕೆ ಬಿಡುವುದಕ್ಕೆ ಸಾಧ್ಯವಿಲ್ಲ. ಹೋದಸಾರಿ ಮಂಡನೆ ಮಾಡುವಾಗ, ಏನಾದರೂ ಸ್ವಲ್ಪ ಇದರ ಬಗ್ಗೆ ರಿಪೇರಿ ಆಗಬಹುದು ಎಂದು ತಿಳಿದುಕೊಂಡಿದ್ದೆವು. ಆದರೆ ಯಾವ ರಿಪೇರಿಯೂ ಆಗಲಿಲ್ಲ. ಒಂದು ಸೂಜಿ ಮನೆಯಷ್ಟು ಸಂಧಾರಿಸಿದಂತೆ ಕಾಣಲಿಲ್ಲ. ಮತ್ತೆ ಇದನ್ನು ಮಂಡನೆ ಮಾಡಿದರೆ ಯಾವ ಪ್ರಯೋಜನವೂ ಇಲ್ಲ. ಆದ್ದರಿಂದ ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿ ಕೊಳ್ಳುತ್ತೇನೆ. ದಯವಿಟ್ಟು ಈ ಬೇಡಿಕೆಯನ್ನು ಮಂಡನೆ ಮಾಡುವುದು ಬೇಡ.

ಅಧ್ಯಕ್ಷರು.—ತಮಗೆ ಅರ್ಜೆಂಟ್ ಕೆಲಸ ಏನಾದರೂ ಇದೆಯೇ, ತಾವು ಮನೆಗೆ ಹೋಗಬೇಕೇ?

ಶ್ರೀ ಕೋಣಂದೂರು ಲಿಂಗಪ್ಪ.—ತಮ್ಮ ಕೃಪಾಕಟಾಕ್ಷದಿಂದ ಇನ್ನೂ ಐದು ವರ್ಷಗಳವರಿಗೆ ಇಲ್ಲಿಯೇ ಇದ್ದು ಹೋಗೋಣ ಎಂದು ಬಂದಿದ್ದೇವೆ. ಎಲ್ಲಿಯವರೆಗೆ ಸೊಸೈಟಿಗಳಲ್ಲಿ ಎಲ್ಲಾ ಪಕ್ಷಗಳವರೆಗೆ ಮಂತ್ರಿ ಎಲ್ಲಾ ಜನರಿಗೆ ಸರಿಯಾದ ಪ್ರಾತಿನಿಧ್ಯ ಕೊಟ್ಟು ನಾಮಕರಣ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಡಿಮ್ಯಾಂಡನ್ನು ಮಂಡನೆ ಮಾಡುವುದಕ್ಕೆ ಬಿಡುವುದಕ್ಕೆ ನಾವು ತಯಾರು ಇಲ್ಲ.

ಶ್ರೀ ಜಿ.ಎಸ್. ಪಾಟೀಲ್.—ತಾವು ನಮ್ಮ ಮನೆಗೆ ಹೋಗಬೇಕೇ ಎಂದು ಕೇಳಿದಿರಿ, ಅಸೆಂಬ್ಲಿಯನ್ನು ಡಿಸಾಲ್ವ್ ಮಾಡಿದರೆ, ಮುಖ್ಯಮಂತ್ರಿಗಳ ಜೊತೆಯಲ್ಲಿ ನಾವೂ ಮನೆಗೆ ಹೋಗಲು ಒಪ್ಪಿಕೊಳ್ಳುತ್ತೇವೆ.

ಅಧ್ಯಕ್ಷರು.—ಬಹಳ ದೊಡ್ಡ ಪ್ರಶ್ನೆಯನ್ನು ಎತ್ತಿದ್ದೀರಿ.

ಶ್ರೀ ಸಿ. ಬೈರೇಗೌಡ.—ಈಗ ನನ್ನ ಸಲಹೆ ಒಂದನ್ನು ಕೊಡಲು ಬಯಸುತ್ತೇನೆ. ಈಗ ನಾವಿ ನೇಷನ್ ಮಾಡಿರತಕ್ಕ ಸೊಸೈಟಿಗಳಿಗೆ ಆಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡಿ ಒಂದೆರಡು ತಿಂಗಳಲ್ಲಿ ಚುನಾವಣೆಗಳನ್ನು ತಾವು ನಡೆಸುವುದಕ್ಕೆ ಸಾಧ್ಯವಿದೆ. ಇದಕ್ಕೆ ಸರ್ಕಾರದವರು ಒಪ್ಪಿಕೊಂಡರೆ ನಾವು ಈ ಡಿಮ್ಯಾಂಡನ್ನು ಮಂಡನೆ ಮಾಡಲು ಒಪ್ಪುತ್ತೇವೆ.

ಶ್ರೀ ಹೆಚ್.ಡಿ. ದೇವೇಗೌಡ —ಈಗ ನಡೆದಿರತಕ್ಕ ಅನಾಹುತಕ್ಕೆ ನಮಗೆ ತಕ್ಕ ಪರಿಹಾರ ದೊರೆಯಬೇಕು. ತಾವು ಸಭಾನಾಯಕರನ್ನು ದಯಮಾಡಿ ತಮ್ಮ ಚೇಂಬರ್ಸ್‌ಗೆ ಕರೆಯಿಸಿ ಚರ್ಚೆ ಮಾಡೋಣ. ಈ ಡಿಮ್ಯಾಂಡ್ ಮಂಡನೆ ಮಾಡುವುದಕ್ಕೆ ಸಹಕಾರ ಕೊಡಲು ಸಾಧ್ಯವಿಲ್ಲ. ಈಗ ನಮಗೆ ಅವರಿಂದ ಅಸಹಕಾರ ಪ್ರಾರಂಭವಾಗಿದೆ ಅದನ್ನು ಪ್ರತಿಬಿಂಬಿಸುತ್ತಿದ್ದೇವೆ.

ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).—ಎಲ್ಲಾ ಸೊಸೈಟಿಗಳಲ್ಲಿ ಅವರಿಗೆ ಬೇಕಾದವರನ್ನೇ ಹಾಕಿಕೊಂಡಿದ್ದಾರೆ. ಪ್ರಜಾಪ್ರಭುತ್ವವನ್ನು ಅನುಸರಿಸಿ ನೇಮಕ ಮಾಡುವುದನ್ನು ಬಿಟ್ಟು ಪ್ರಜಾಪ್ರಭುತ್ವಕ್ಕೆ ಇವರು ಧಕ್ಕೆ ತಂದಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.—ನನಗೆ ಮಾನ್ಯ ಅಧ್ಯಕ್ಷರಿಂದ ಒಂದು ಸ್ಪಷ್ಟೀಕರಣ ಬೇಕಾಗಿದೆ ಈ ಸದನದ ಮುಂದೆ ಇರುವ ಬಿಸಿನೆಸ್ ಸಹಕಾರದ ಇಲಾಖೆಗೆ ಸಂಬಂಧಪಟ್ಟ ಡಿಮ್ಯಾಂಡ್ ಮಂಡನೆ ಮಾಡುವುದು. ಇದುವರೆಗೆ ಆದಂಥ ವಿಷಯ ಯಾವ ಏಟಂನಲ್ಲಿ ಬರುತ್ತದೆ? ಇದು ಪ್ರಶ್ನೋತ್ತರ ವೇಳೆಯೇ? ಶೂನ್ಯ ವೇಳೆಯೇ? ಇದು ನಮ್ಮ ಪ್ರೊಸಿಡಿಂಗ್ಸ್‌ನಲ್ಲಿ ರಿಕಾರ್ಡ್ ಆಗುತ್ತದೆಯೇ ಇಲ್ಲವೆ ಎನ್ನುವ ವಿವರ ಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಪ್ಯಾನಲ್ ಆಫ್ ಚೇರ್ಮನ್‌ನಲ್ಲಿ ಇಲ್ಲವೇ? ಕೋ–ಆಪರೇಷನ್ ಡಿಮ್ಯಾಂಡನ್ನು ಮಂಡನೆ ಮಾಡಿಸಬೇಕು ಎಂದು ನಾನು ಪ್ರಯತ್ನ ಪಡುತ್ತಿದ್ದೇನೆ, ವಿರೋಧಪಕ್ಷದವರು ತಮ್ಮ ಸಹಕಾರ ಕೊಡುತ್ತಿಲ್ಲ. ಈ ಮನೆಯ ಕಾರ್ಯಕಲಾಪಗಳು ಸರಿಯಾಗಿ ನಡೆಯಬೇಕಾದರೆ ಎರಡೂ ಕಡೆಯವರ ಸಹಕಾರ ಬೇಕಾಗುತ್ತದೆ. ಆದ್ದರಿಂದ ನಾನು ಅವರನ್ನು ಸಹಕಾರ ಕೊಡಿ ಎಂದು ಕೇಳುತ್ತಿದ್ದೇನೆ. ಅವರು ತಮಗಾಗಿರುವ ಅನ್ಯಾಯದಿಂದ ಸಹಕಾರ ಕೊಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಈ ಮನೆಯ ನಾಯಕರಾಗಲೀ ಅಥವಾ ಮಂತ್ರಿಗಳಾಗಲಿ, ಯಾರಾದರೂ ಬಂದು ಏನು ಅನ್ಯಾಯವಾಗಿದೆ, ಏನು ಪರಿಹಾರ ಕೊಡಬೇಕು ಎಂದು ಹೇಳಬೇಕಾದಂಥ ಪ್ರಸಂಗ ಇದು. ಅವರಿಗೆ ಪರಿಹಾರ ದೊರಕುವವರೆಗೆ ಅಸಹಕಾರ ತೋರುತ್ತಾರೆ, ಅದನ್ನು ಅನುಭವಿಸಬೇಕು.

ಶ್ರೀ ಎಚ್.ಡಿ. ದೇವೇಗೌಡ.—ನಾನು ಸಭೆಯ ಕ್ಷಮೆ ಕೇಳುತ್ತೇನೆ, ತಮ್ಮ ಕ್ಷಮೆ ಕೇಳುತ್ತೇನೆ ನಮಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು ಎಂದರೆ ಇದು ಒಂದೇ ಮಾರ್ಗ. ಈ ವಿಷಯದಲ್ಲಿ ನಮಗೆ ಪರಿಹಾರ ಹುಡುಕುವವರೆಗೆ ನನಗೆ ಇದಕ್ಕೆ ಸಹಕಾರ ಕೊಡುವುದಕ್ಕೆ ಸಾಧ್ಯವಿಲ್ಲ. ತಮ್ಮಲ್ಲಿ; ಕೈಜೋಡಿಸಿ ಕ್ಷಮೆ ಕೇಳುತ್ತೇನೆ, ನಮ್ಮನ್ನು ಕ್ಷಮಿಸಬೇಕು

ಶ್ರೀ ಬೆಟ್ಟಸ್ವಾಮಿಗೌಡ (ಕುದೂರು).—ಮಾನ್ಯ ಸಹಕಾರ ಸಚಿವರು ಡೆಪ್ಯೂಟಿ ರಿಜಿಸ್ಟ್ರಾರ್ಸ್ ಅವರಿಗೆ ತಿಳಿಸಿ ಇಂಥಿಂಥವರ ಹೆಸರನ್ನು ಕಳುಹಿಸಿ ನಾವು ಅವರನ್ನೇ ನಾಮಕರಣ ಮಾಡುತ್ತೇವೆ ಎಂದು ಅವರಿಗೆ ಬೇಕಾದವರನ್ನೇ ಸೊಸೈಟಿಗಳಲ್ಲಿ ನಾಮಿನೇಷನ್ ಮಾಡಿಕೊಂಡಿದ್ದಾರೆ.

SRI K. H. RANGANATH — I very strongly refute this type of insinuation against me. I would take a challenge here.

(Interruption by some members)

I am on my legs and the hon'ble members cannot speak when I have not yielded. Madam Speaker, I have not even been called by the Chair to move my Demands. Any way, the Hon'ble Leader of the opposition thinking that the Chair would call me to move the demands, raised this aspect of it and it is going on. Unless I am called by the Speaker, I am not expected to say anythig.

In the meanwhile, my hon'ble friend Mr. Bettaswami Gowda makes a very serious allegation and casting aspersions on my behaviour and he says that I have given personal instructions to the Deputy Registrars that he should only send names which I want. It is a very serious thing. If it is proved I will not be here. Not only I will relinquish my office as a Minister but I will resign and go away. I want to know whether he is prepared to prove that allegation because it has become just a fancy to say anything and every thing. I take it a challenge.

3-00 P.M.

ಶ್ರೀ ಎಚ್. ಡಿ. ದೇವೆಗೌಡ.—ಪ್ರತಿಯೊಬ್ಬ ಡೆಪ್ಯುಟಿ ರಿಜಿಸ್ಟ್ರಾರ್ ಅವರನ್ನು ಕರೆ.....

SRI K. H. RANGANATH.—I was very fair to the Hon'ble Leader of of the Opposition. He said in respect of Bangalore Deputy Registrar and in respect of his Taluka.

SRI BETTASWAMY GOWDA.—It has been done in every taluka and not only in Bangalore. ನಾನು ಹೇಳಿರತಕ್ಕ ವಿಚಾರ ಸತ್ಯವಾದ ವಿಚಾರ. ಇವರ ಬಗ್ಗೆ ನಾನು ಅಧಿಕಾರಿಗಳ ಹೆಸರನ್ನು ಹೇಳಿದರೆ ಅವರಿಗೆ ತೊಂದರೆಯಾಗುತ್ತದೆ. ಇವರು ಯಾವ ತೊಂದರೆಯನ್ನು ಮಾಡುವುದಕ್ಕೆ ಹೇಸುವುದಿಲ್ಲ. ನಾವೇ ಚಕ್ರವರ್ತಿ ಎಂದು ತಿಳಿದುಕೊಂಡಿದ್ದಾರೆ. ಆದ್ದರಿಂದ ನಾನು ಅವರ ಹೆಸರನ್ನು ಹೇಳುವುದಿಲ್ಲ.

SRI K. H. RANGANATH.—I don't want to arrogate myself that virtue. But the point is whether the hon'ble Member is prepared to prove. I want to know from him. In fact, the Officer will be there. Any impartial inquiry can be held. I am prepared to face that

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಧ್ಯಕ್ಷರಿಗೆ, ಮಾನ್ಯ ಸಹಕಾರ ಮಂತ್ರಿಗಳ ಬಗ್ಗೆ, ನಮಗೆ ತುಂಬಾ ಗೌರವವಿದೆ. ಆದರೆ ನಮಗೆ ಒಂದು ತರಹದ ಆಗುವ ಹಾಗೆ ಅವರೇ ಮಾಡಿದ್ದಾರೆ.

SRI K. H. RANGANATH.—I got the permission from the Chair to speak. I should say something. ಮಾನ್ಯ ಸದಸ್ಯರು ಹೇಳಿತಕ್ಕ ಮಾತು ಸತ್ಯ ಇದ್ದರೆ ಅದನ್ನು ಅವರು ಸಾಬೀತು ಮಾಡಬೇಕಾಗುತ್ತದೆ I have not instructed any Deputy Registrar to send particular names so that he could only nominate

those names. The allegation is only to that extent. ನಾನು ಯಾವ ಅಧಿಕಾರಿಗೂ ಇನ್‌ಸ್ಪ್ರಕ್ಷನ್ ಕೊಟ್ಟಿಲ್ಲ. ಇಂತಹ ಹೆಸರನ್ನು ಕಳುಹಿಸಿ ಎಂದು ಹೇಳಿಲ್ಲ. ಅದರಲ್ಲೂ ಕೂಡ ಮಾನ್ಯಸದಸ್ಯರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಯಾವುದು ಹೇಳಿಲ್ಲ. I am prepared to face the consequences and I don't desire to be here.

SRI H. D. DEVE GOWDA.—Let there be an opportunity given An opportunity must be given to the Opposition Members to prove that.

ಶ್ರೀ ಬೆಟ್ಟಸ್ವಾಮಿ ಗೌಡ —ಮಾನ್ಯ ಮಂತ್ರಿಗಳು ನಾನು ಯಾರಿಗೂ ಇನ್‌ಸ್ಪ್ರಕ್ಷನ್ ಕೊಟ್ಟಿಲ್ಲ. ಎಂದು ಹೇಳುತ್ತಾರೆ. ಇದು ನಮ್ಮ ತಾಲ್ಲೂಕಿನಲ್ಲಿ ನಡದಿದೆ

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಸಾಬೀತು ಮಾಡುವುದಾದರೆ ನಾನು ತಕ್ಷಣ ಇಲ್ಲಿ ಇರಕೂಡದು

SRI PRABHAKAR TELKAR —This is not the way. Let him accept he challenge. He is mentioning about other details.

ಶ್ರೀ ಬೆಟ್ಟಸ್ವಾಮಿ ಗೌಡ.—ಇದರ ಬಗ್ಗೆ ಅಧಿಕಾರಿಗಳ ಹೆಸರನ್ನು ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕಥೆ ಹೇಳುವುದಲ್ಲ, ಮಾನ್ಯ ಮಂತ್ರಿಗಳು ಸಾಬೀತು ಮಾಡುವ ಬಗ್ಗೆ ಚಾಲೆಂಜ್ ಮಾಡಿದ್ದಾರೆ.

ಶ್ರೀ ಬೆಟ್ಟಸ್ವಾಮಿ ಗೌಡ.—ಅಧ್ಯಕ್ಷರೇ, ಈಗ ನನಗೆ ತಿಳಿದಿರತಕ್ಕ ವಿಚಾರವನ್ನು ಅಧಿಕಾರಿಗಳ ಮಂಖಾಂತರ ತಿಳಿದಿದ್ದೇನೆ. ಆದ್ದರಿಂದ ಇದನ್ನು ಸಾಬೀತು ಮಾಡಬೇಕಾದರೆ ಮಾನ್ಯ ಮಂತ್ರಿಗಳ ರಾಜೀನಾಮೆ ಕೊಟ್ಟರೆ ರುಜುವಾತು ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾನು ಒಂದು ಸಲಹೆ ಯನ್ನು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ದಯಮಾಡಿ ಸಭಾನಾಯಕರನ್ನು ಕರೆಯಿಸಬೇಕು, ಏಕೆಂದರೆ ಇದು ಬಹಳ ಗಹನವಾದ ವಿಚಾರ, ತಾವು ಈ ಸಭೆಗೆ ಅಧ್ಯಕ್ಷರಾಗಿರತಕ್ಕ ಕಾಲದಲ್ಲಿ ನಾನು ಅಹಿತಕರ ಘಟನೆ ಮಾಡಲಿಕ್ಕೆ ನನಗೆ ಇಚ್ಛೆಯಿಲ್ಲ. ಈ ಸಂದರ್ಭದಲ್ಲಿ ಯಾರನ್ನೂ ದೂರುವುದು ಬೇಡ ಎಂದು ಈ ಸಭೆಯ ಎಲ್ಲ ಸದಸ್ಯರನ್ನು ಕೇಳಿಕೊಳ್ಳುತ್ತೇನೆ ರಾಜ್ಯದ ಎಲ್ಲಾ ಭಾಗದಲೂ ಇಂತಹ ಸನ್ನಿವೇಶ ಉಂಟಾಗಿದೆ ಇದರ ಬಗ್ಗೆ ಪರ್ಯಾಲೋಚನೆ ಮಾಡಲಿ ನಾವು ಈ ಬೇಡಿಕೆಗೆ ಮಂಜೂರು ಮಾಡಬಾರದು ಎಂದು ಇಲ್ಲ ಅಥವಾ ನಮ್ಮ ಸಹಕಾರ ಕೊಡಬಾರದು ಎಂದು ಇಲ್ಲ, ಇನ್ನು ಈ ಸಭೆ ೩೦ ದಿವಸಗಳು ನಡೆಯುತ್ತದೆ, ಆದುದರಿಂದ ಇದನ್ನು ಬೇರೆ ಯಾವದಿವಸವಾದರೂ ಇಟ್ಟುಕೊಳ್ಳೋಣ. ಮಾನ್ಯ ಸಭಾನಾಯಕರು ಈ ಮನೆಗೆ ಬಂದು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ನಾವು ಸಹಕರಿಸುತ್ತೇವೆ.

ಶ್ರೀ ಕೆ ಹೆಚ್. ಪಾಟೀಲ್ (ಆಹಾರ ಮತ್ತು ಅರಣ್ಯ ಮಂತ್ರಿಗಳು).—ಮಾನ್ಯ ವಿರೋಧಪಕ್ಷದ ನಾಯಕರು ನಮಗೆ ಸಮಾಧಾನವಾಗುವಂತೆ, ಏನಾದರೂ ತಪ್ಪುಗಳಾಗಿದ್ದರೆ, ತಪ್ಪುಗಳನ್ನು ತಿದ್ದುವ ಆಶ್ವಾಸನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರೆ ನಾವು ಸಹಕರಿಸುತ್ತೇವೆ. ಎಂದು ಹೇಳಿದರು, ಸಹಕಾರ ಸಚಿವರೇ ಆ ರೀತಿ ಏನಾದರೂ ಮಾತನಾಡಿ ಬಗೆಹರಿಸಬಹುದು, ಆದ್ದರಿಂದ ಅಧ್ಯಕ್ಷರು ೧೫ ನಿಮಿಷಗಳ ವರೆಗೆ ಟೀ ಬ್ರೇಕ್ ಮಾಡಿ ನಂತರ ಚರ್ಚೆ ಮಾಡಿದರೆ ಒಳ್ಳೆಯದು.

ಶ್ರೀ ಹೆಚ್. ಡಿ. ದೇವೇಗೌಡ —ಮಾನ್ಯ ಸಹಕಾರ ಮಂತ್ರಿಗಳ ಬಗ್ಗೆ ನಮಗೆ ಅಪಾರ ಗೌರವ ಇದೆ. ಅದರ ಬಗ್ಗೆ ನಾನು ಮತ್ತೊಮ್ಮೆ ಪುನರುಚ್ಚಾರ ಮಾಡಿ ಹೇಳುತ್ತೇನೆ. ಈ ನಾಮಿನೇಷನ್ ವಿಷಯದಲ್ಲಿ ಅನೇಕಸಾರಿ ಮಾನ್ಯ ಸಚಿವರ ಅಭಿಪ್ರಾಯಕ್ಕೆ ವಿರುದ್ಧವಾಗಿ ನಡೆದಿದೆ. ಅವರು ಈ ಸ್ಥಿತಿಯಲ್ಲಿ ಹೇಳದೇ ಇರಬಹುದು. ಅವರು ಹೇಳಿದೇ ಹೋದರು ಅವರ ಆತ್ಮವಂಚನೆ ಮಾಡಿಕೊಳ್ಳಬೇಕಾಗುತ್ತದೆ. ಅವರನ್ನು ನಾವು ಇಕ್ಕಟ್ಟಿಗೆ ಸಿಕ್ಕಿಸುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಬರಬೇಕು ಎಂದು ಹೇಳುತ್ತಿದ್ದೇನೆ ಇಂತಹ ಸನ್ನಿವೇಶವನ್ನು ಸರಿಪಡಿಸಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಬರಬೇಕು ಎಂದು ಹೇಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರ್ಕೇ ನಮ್ಮ ಮಾನ್ಯ ಗೆಳೆಯರೂ ಎತ್ತಿರುವ ಆಕ್ಷೇಪಣೆ ಎಂದರೆ. ''ಸಹಕಾರ ಸಂಘಗಳು ಆಡಳಿತಪಕ್ಷದ ಸ್ವಾಮ್ಯವಾಗಿವೆ'' ಎಂದು.

(ಗೊಂದಲ)

ಅಧ್ಯಕ್ಷರು.—ಹೀಗೆ ಎಲ್ಲರೂ ಒಟ್ಟಿಗೆ ಎದ್ದು ನಿಂತುಕೊಂಡು ಕೂಗಾಡಿದರೆ ಯಾವ ಕೆಲಸವನ್ನು ಮಾಡುವುದಕ್ಕಾಗುತ್ತದೆ ? ಹೊಸದಾಗಿ ಆರಿಸಿ ಬಂದ ಸದಸ್ಯರು ಆಡಿದಂತೆ ಆಡುತ್ತಿದ್ದೀರಿ ಈಗ್ಗೆ ೫ ವರ್ಷಗಳಿಂದಲೂ ಮಾಡಿದ್ದನ್ನೆಲ್ಲಾ ಮರೆತುಬಿಟ್ಟಿರಾ ?

SRI H. T. KRISHNAPPA.—It is not the way how the Debate should go.

MADAM SPEAKER.—I certainly agree with him.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇನ್ನು ''ಮೂರ್ಖರಿಗೆ ನೂರ್ಕಾಲ ಬುದ್ಧಿ ಹೇಳಿದರೂ'' ಎಂದು ಸರ್ವಜ್ಞನ ನೀತಿ ಬೋಧೆಯ ಮಾತನ್ನು ನಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮಗೆ ನೀವು ಬುದ್ಧಿ ಹೇಳಲು ನಿಮ್ಮಿಂದ ಸಾಧ್ಯವೇ ಇಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಸಭಾಧ್ಯಕ್ಷಣಿಯವರೆ, ಈ ರೀತಿ ಅವರು ಆಡಬೇಕೆಂದಿದ್ದರೆ ಅದಕ್ಕೆ ನಾನು ಸಿದ್ಧ, ಹೊಡೆದಾಟ ಆಡುವಂತಿದ್ದರೂ ಬರಲಿ, ಕಂಸ್ತಿ ಮಾಡುವುದಕ್ಕೆ ಅವರು ತಯಾರಿದ್ದರೆ ಬರಲಿ, ನಾನು ಅದಕ್ಕೂ ಸಿದ್ಧವಾಗಿದ್ದೇನೆ. ಆದರೆ ಇಲ್ಲಿ ಬೇಡ. ಹೊರಗಡೆ ಹೋಗೋಣ.

ಶ್ರೀ ಎಚ್. ಡಿ. ದೇವೇಗೌಡ.—ನಾವೇನು ಸೊಸೈಟಿಯಲ್ಲಿ ಮೆಂಬರ್‌ಷಿಪ್ ಮಾಡಿಸಿಕೊಳ್ಳುವುದ ಕ್ಕೋಸ್ಕರ ಪಕ್ಷಾಂತರ ಮಾಡಲಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಕೆ.ಹೆಚ್. ಪಾಟೀಲರು ಮಾಡಿರುವ ಸಲಹೆಯಂತೆ ಮಾನ್ಯ ಮಂಖ್ಯ ಮಂತ್ರಿಗಳನ್ನೂ, ವಿರೋಧ ಪಕ್ಷದ ನಾಯಕರನ್ನೂ ಒಳಗೆಡೆ ಕರಸಿಕೊಂಡು ಮಾತನಾಡಬೇಕಾಗಿರುವುದರಿಂದ ಸಭೆಯನ್ನು ಅರ್ಧ ಗಂಟೆಯ ಕಾಲ ಮುಂದಕ್ಕೆ ಹಾಕಿದ್ದೇನೆ.

House rose at fifteen Minutes past Three of the clock and ressembled at Thirty two minutes past four of the clock

[MADAM SPEAKER In the chair.]

† SRI K. PUTTASWAMY (Chamundeswari).—Before the House rose, I was trying to catch your eyes. I wanted to make a submission that you have been repeatedly pointing out the rules of Procedure which we have to accept and in ordinary circumstance, the rules have to be observed. But Madam Speaker, You know that democracy functions not only by rules but also by conventions. You are the custodian of our rights, rights of the Hon'ble Members and the rights of this House. We have no other way except to appeal to you to protect our rights; irrespective of the side to which we belong, the Hon'ble Members have a right and our Hon'ble friends who are in the Treasury

benches have certain rights and obligation. The obligation is that, whenever they hold out an assurance, they have to discharge that obligation. In this connection, without going into the meriti of what has happened so far, I wanted to make a humble submission to you Madam Speaker. Madam Speaker, last year, the Hon'ble Chief Minister held out an assurance that he would make a statement on the subject matter reported in the Public Accounts Committee the 4th Report and presented to the House on 26th December, 1975 and the matter relating to the working of the State Marketing Co-operative Federation. Till today that statement has not been made. I just wanted to make a submission to you Madam Speaker, to ask the Government to make that statement now. I know, the subject matter in one or the other way has been referred to the Commission But all the same, Madam Speaker, a statement by the Government is not going to prejudice the enquiry before the Enquiry Commission. Because, there are certain other points also referred. For Example : Madam Speaker, I have just noted down some points Guarantee Commission of Rs. 2 99 lakhs has not been recovered. No statement has been made whether they have been recovered it at all. In respect of the Karnataka Industrial Co-operative Bank Mysore Branch, there is one case where money has been advanced as aganist machinery, but that conserned person is not traceable A person who has taken Rs. 70000 as loan was absconding. I do not know whether he is a fictitious person. He may be a fictitious perton and he may be absconding. The amount outstanding against such person is Rs. 1½ lakhs. As regards overdraft to non-members of the banks, how they give overdrafts? The Karnataka Industrial Co-operative Bank has given Rs. 1 90 lakhs. Coming to defaulcation in certain T.A.P.M.S. coming as you do from Gundlupet, you know in such societies at Gundlupet, Nanjangud, Mysore, Tiptur and other places.

SRI K H. RANGANATH.—Madam Speaker, I raise on a point of order. We are at the stage when you are about to call me to move the demand and the subject to be taken up. At that stage, the Hon'ble Leader of the House raised certain issues and they were discussed and you were pleased to adjourn the House for some time. Now we have reassembled and we are at that stage now; and the Hon'ble Member is now raising issues referring to my own Department and also he is quoting exhaustively from the Public Accounts Committee reports. Also he is demanding the Hon'ble Chief Minister to make a statement on a assurance held out in the last session. These things only arise provided I am allowed to move my demand and the demand is taken up for discussion. This is the point of Order I raised, probably it may not be in order to allow Hon'ble Member to make a speech on these things.

SRI K. PUTTASWAMY.—I have already submitted that ordinarily that is the procedure followed; there is sufficient force in what he has said. I do not dispute it. What I have been submitting is that we do not function only by rule of law We enjoy certain rights and our rights will have to be protected and, therefore, I request you, Madam Speaker, to call upon the Hon'ble Leader of the House to make a statement which he has promised to me.

SRI K.H. RANGANATH.—I quite understand that we are governed not only by rules but also by conventions. But is the House seized of the demands ? Is there any discussion now. If the House is seized of the matter, than the Hon'ble Member is within his rights to raise it even as a matter of convention let alone under the rules.

MADAM SPEAKER.— Has the Hon'ble Chief Minister to say anything ?

SRI D. DEVARAJ URS —I have nothing to say at this stage. What are the points on which I can make a statement is a matter which has to be gone into now. I cannot make a statement now. It is true I have made a promise here but in the meanwhile so many things have happened and as he himself pointed out this whole question has been referred to a commission of enquiry. So, how can I make a statement now ? Let him give those points. I will study them and if it is found that even if they are the subject matter of the enquiry I will look into them. It is only thereafter that I can make a statement.

Budget Estimates for 1977-78 (Demands for grants)

Demands No. 37-38

SRI K. H RANGANATH (Minister for Co-operation).—Madam, on the recommendation of the Governor, I beg to move;

> "That a sum not exceeding Rs. 15,91,01,000 inclusive of the sum granted on account (be granted to the Government to defray the charges which will come in course of payment during the financial year ending 31st day of March 1978 in respect of Demand No. 37 Co-operation (Excluding Regulated Markets)."

SRI R. D. KITTUR (Minister of State for Regulated Markets).—Madam, on the recommendation of the Governor, I beg to move :

> "That a sum not exceeding Rs. 1,33,82,000 inclusive of the sum granted on account be granted to the Government to defray the charges which will in course of payment during the financial year ending 31st day of March 1978 in respect of Demand No. 38. Regulated Markets".